॥ ಸೋಮನಾಥೇಶ್ವರಂ ವಂದೇ ಚೌಟ ಸೀಮಾ ಪುರೀಶ್ವರಂ ॥
॥ ಪುತ್ತಿಗೆ ಕ್ಷೇತ್ರ ಸಂಸ್ಥಿತಂ ಶ್ರೀ ದುರ್ಗಾಗಣ ಪೈರ್ಯುತಂ ॥

# ಮಹತೋಭಾರ ಶ್ರೀ ಸೋಮನಾಥೇಶ್ವರ ದೇವಸ್ಥಾನ
# ಶ್ರೀ ಕ್ಷೇತ್ರ ಪುತ್ತಿಗೆ, ಮೂಡಬಿದಿರೆ

ಅಂಚೆ : ಮಿತ್ತಬೈಲು – 574226, ಮೂಡಬಿದಿರೆ ತಾಲೂಕು, ದ.ಕ., ಕರ್ನಾಟಕ



## ಶ್ರೀ ಕ್ಷೇತ್ರ ಜೀರ್ಣೋದ್ಧಾರದ
## ವಿನಮ್ರ ನಿವೇದನೆ

॥ ಶ್ರೀ ಸೋಮನಾಥೇಶ್ವರ ಪ್ರಸನ್ನಃ ॥ ॥ ಶ್ರೀ ಮಹಿಷಮರ್ದಿನಿ ಪ್ರಸನ್ನಃ ॥

# ಮಹತೋಭಾರ ಶ್ರೀ ಸೋಮನಾಥೇಶ್ವರ ದೇವಸ್ಥಾನ, ಪುತ್ತಿಗೆ

## ಶ್ರೀ ಕ್ಷೇತ್ರ ಜೀರ್ಣೋದ್ಧಾರದ ವಿನಮ್ರ ನಿವೇದನೆ

ಭಗವದ್ಭಕ್ತರೇ,

ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದಿರೆ ತಾಲೂಕಿನ ಪುತ್ತಿಗೆ ಗ್ರಾಮದಲ್ಲಿ ಸಪರಿವಾರವಾಗಿ ಕಂಗೊಳಿಸುತ್ತಿರುವ ಮಹತೋಭಾರ ಶ್ರೀ ಸೋಮನಾಥೇಶ್ವರ ದೇವಸ್ಥಾನ ಧರ್ಮ ಆಧ್ಯಾತ್ಮಿಕ ಆಧಾರಿತವಾಗಿ ಜನಪದಕ್ಕೆ ಶ್ರದ್ಧಾಸ್ಥಾನವಾಗಿದೆ. ತುಳುನಾಡಿನ ಪ್ರತಿಷ್ಠಿತ ಅರಸು ಮನೆತನವಾದ ಚೌಟರಿಂದ ಸ್ಥಾಪಿತವಾಗಿ ಐತಿಹಾಸಿಕ ಮಹತ್ವವನ್ನು ಪಡೆದು ಸರಿಸುಮಾರು 800 ವರ್ಷಗಳ ವೈಭವದ ಇತಿಹಾಸವನ್ನು ಪಡೆದುಕೊಂಡಿದೆ.

ನಾಗು ನದಿಯ ತಟದಲ್ಲಿ ವಿಶಾಲವಾದ ಮೂರು ಸುತ್ತಿನ ಪ್ರಾಂಗಣವನ್ನು ಹೊಂದಿರುವ ದೇವಳದ ಒಳಪ್ರಾಕಾರದಲ್ಲಿ ಕೇಂದ್ರಪ್ರಾಯವಾಗಿ ಪಶ್ಚಿಮಾಭಿಮುಖ ಸ್ಥಿತ ದ್ವಿದಳ ಗರ್ಭಗುಡಿಯಲ್ಲಿ ಕರುಣಾಪೂರ್ಣರಾದ ಶ್ರೀ ಸೋಮನಾಥೇಶ್ವರ ದೇವರ ದಿವ್ಯ - ಸುಂದರ ಸಂಶೋಭಿತ ಲಿಂಗವಿದೆ. ನಿತ್ಯನೂತನರಾದ ಶ್ರೀ ದೇವರು ಭಕ್ತಕೋಟಿಯನ್ನು ಆಕರ್ಷಿಸುವ ಪರಿಯು ವಿಶಿಷ್ಟವಾದುದು ಎಂಬುದು ಭಕ್ತರ ಅಭಿಪ್ರಾಯ. ಶ್ರೀ ದೇವರ ಬಲಭಾಗದಲ್ಲಿ ಷಡ್ಭುಜ ಶ್ರೀ ಮಹಿಷಮರ್ದಿನಿ ಅಮ್ಮನವರ ಶಾಂತಗಂಭೀರ ರೂಪದ ಆಕರ್ಷಣೀಯ ವಿಗ್ರಹವಿದೆ. ಎಡಭಾಗದಲ್ಲಿ ಪ್ರಥಮ ಪೂಜಿತ ಶ್ರೀ ಮಹಾಗಣಪತಿ ದೇವರ ಅಭಯಪ್ರದವಾದ ವಿಗ್ರಹವಿದೆ. ಒಳಾಂಗಣದ ವಾಯುವ್ಯ ದಿಕ್ಕಿನಲ್ಲಿ ಶ್ರೀ ಲಕ್ಷ್ಮೀನರಸಿಂಹ ಮತ್ತು ಶ್ರೀ ಚಂದ್ರನಾಥೇಶ್ವರ ದೇವರ ಸಂಕಲ್ಪವಿದೆ. ನೈರುತ್ಯ ದಿಕ್ಕಿನಲ್ಲಿ ಪ್ರಸಿದ್ಧ ಪಂಚಧೂಮಾವತಿ ದೈವದ ಗುಡಿಯಿದೆ. ಮಧ್ಯಪ್ರಾಂಗಣದ ಪೂರ್ವ ದಿಕ್ಕಿನಲ್ಲಿ ಕರಿಯಮಾಲ ದೈವದ ಸನ್ನಿಧಾನವಿದ್ದರೆ, ಹೊರಪ್ರಾಂಗಣದ ಪಶ್ಚಿಮದಲ್ಲಿ ರಕ್ತೇಶ್ವರೀ ಗುಡಿಯಿದೆ. ಹೀಗೆ ಹಲವಾರು ವೈಶಿಷ್ಟ್ಯಗಳು, ಪ್ರಾಕೃತಿಕ ಸೌಂದರ್ಯಗಳಿಂದ ಕ್ಷೇತ್ರವು ಶೋಭಾಯಮಾನವಾಗಿ ಬೆಳಗುತ್ತಿದೆ.

## ಜೀರ್ಣೋದ್ಧಾರ

18 ಮಾಗಣೆಗಳ ಅತ್ಯಂತ ಪುರಾತನ, ಚೌಟ ಅರಸರಿಂದ ನಿರ್ಮಿತವಾದ ದೇವಸ್ಥಾನ ಇಂದು ಶಿಥಿಲಗೊಂಡಿದ್ದು, ಭವ್ಯ ನವನಿರ್ಮಾಣದ ಮಹಾಭಾಗ್ಯ ಭಕ್ತಕೋಟಿಯ ಮುಂದಿದೆ. ದೇವಸ್ಥಾನದ ಆಡಳಿತ ಮಂಡಳಿ ಹಾಗೂ ಕ್ಷೇತ್ರದ ಆಸ್ತಿಕ ಬಂಧುಗಳು ನಡೆಸಿದ

‘ಸ್ವರ್ಣಾರೂಢ ಪ್ರಶ್ನೆ’ಯಲ್ಲಿ ಕ್ಷೇತ್ರ ಸ್ವಾಮಿನಿ ಶ್ರೀ ಮಹಿಷಮರ್ದಿನಿ ಅಮ್ಮನವರಿಗೂ ವಿಶೇಷ ವಾಸ್ತು ಪ್ರಾಯವಾದ ಆಲಯವನ್ನು ನಿರ್ಮಿಸಿ, ತಕ್ಕಂತೆ ಸ್ಥಾನ – ಮಾನ, ಪೂಜಾ – ಕೈಂಕರ್ಯಗಳನ್ನು ನಡೆಸಬೇಕೆಂಬುದು ಶ್ರೀ ದೇವರ ಪ್ರೇರಣೆ.

**ಸಮಗ್ರ ಜೀರ್ಣೋದ್ಧಾರಕ್ಕೆ ಅಂದಾಜು 15 ಕೋಟಿ ರೂಪಾಯಿ ವೆಚ್ಚದ ಯೋಜನೆ ಸಿದ್ಧಗೊಂಡಿದೆ.**

**ಗರ್ಭಗುಡಿ :** ಅಂದಾಜು ರೂ. 1.5 ಕೋಟಿ ವೆಚ್ಚದಲ್ಲಿ ಶ್ರೀ ಸೋಮನಾಥೇಶ್ವರ ದೇವರ ಶಿಲಾಮಯ ಗರ್ಭಗುಡಿಯ ನಿರ್ಮಾಣ. ಅಂದಾಜು ರೂ. 1 ಕೋಟಿ ವೆಚ್ಚದಲ್ಲಿ ಶ್ರೀ ಮಹಿಷಮರ್ದಿನಿ ಅಮ್ಮನವರ ಶಿಲಾಮಯ ಗರ್ಭಗುಡಿಯ ನಿರ್ಮಾಣ.

**ತೀರ್ಥಮಂಟಪ :** ಅಂದಾಜು 30 ಲಕ್ಷ ವೆಚ್ಚದಲ್ಲಿ ಶಿಲಾಮಯ ತೀರ್ಥಮಂಟಪ ನಿರ್ಮಾಣ.

**ಧ್ವಜಸ್ತಂಭ :** ಅಂದಾಜು ರೂ. 15 ಲಕ್ಷ ವೆಚ್ಚದಲ್ಲಿ ಈಗಿನ ಧ್ವಜಸ್ತಂಭವನ್ನು ತೆಗೆದು ಅದರಂತೆಯೇ ಹೊಸ ಧ್ವಜಸ್ತಂಭವನ್ನು ಪ್ರತಿಷ್ಠಾಪಿಸಿ, ಲೋಹದ ಹೊದಿಕೆ ಹೊದಿಸುವುದು.

**ಒಂದನೇ ಸುತ್ತು ಪೌಳಿ :** ಅಂದಾಜು ರೂಪಾಯಿ 4 ಕೋಟಿ 50 ಲಕ್ಷ ವೆಚ್ಚ

**ಎರಡನೇ ಸುತ್ತು ಪೌಳಿ :** ಅಂದಾಜು ರೂಪಾಯಿ 6 ಕೋಟಿ ವೆಚ್ಚ

**ಪೂರ್ವ ಮತ್ತು ಪಶ್ಚಿಮ ಗೋಪುರಗಳು :** ಅಂದಾಜು ರೂಪಾಯಿ 1 ಕೋಟಿ ವೆಚ್ಚ. ಇತರ ರೂಪಾಯಿ 55 ಲಕ್ಷ ವೆಚ್ಚ.



ಈ ಧಾರ್ಮಿಕ ಬೃಹತ್ ಪುಣ್ಯ ಕೈಂಕರ್ಯದಲ್ಲಿ ಊರ–ಪರವೂರ ಭಕ್ತಬಾಂಧವರು ತ್ರಿಕರಣಶುದ್ಧರಾಗಿ ಹೃತ್ಪೂರ್ವಕ ಸಹಕಾರದಿಂದ ಕೂಡಿ ನಡೆದರೆ ಮಾಡುವ ಸೇವೆಯು ನಿರ್ವಿಘ್ನವಾಗಿ ಕೃತಾರ್ಥವಾಗುವುದರಲ್ಲಿ ಸಂಶಯವಿಲ್ಲ. ಶ್ರೀ ಸೋಮನಾಥೇಶ್ವರ ದೇವರ ಸೇವೆಯೆಂದು ಉದಾತ್ತ ಮನಸ್ಸಿನಿಂದ ನೆರವು ನೀಡಿ, ಕರುಣಾನುಗ್ರಹಕ್ಕೆ ಪಾತ್ರರಾಗಬೇಕಾಗಿ ವಿನಮ್ರ ವಿನಂತಿಸುತ್ತೇವೆ.

**ಸುಸಜ್ಜಿತ ಕಲ್ಯಾಣ ಮಂಟಪ, ಭೂಮಂಡಲ ರಥ ಹಾಗೂ ಶ್ರೀ ದೇವರ ಅವಭೃತ ತಟಾಕದ ನಿರ್ಮಾಣ ಸಂಕಲ್ಪವೂ ಇದೆ**

**ಕುಲದೀಪ ಎಂ.**
**ಚೌಟರ ಅರಮನೆ, ಮೂಡಬಿದಿರೆ**
**ಆನುವಂಶಿಕ ಆಡಳಿತ ಮೊಕ್ತೇಸರರು**

**ಅಧ್ಯಕ್ಷರು, ಪದಾಧಿಕಾರಿಗಳು**
**ಮತ್ತು ಸರ್ವ ಸದಸ್ಯರು**
**ಅಭಿವೃದ್ಧಿ ಸಮಿತಿ**

**ಮಾಗಣೆಯ ಹತ್ತು ಸಮಸ್ತರು**

**ಭಕ್ತಾದಿಗಳು ತಮ್ಮ ಕೊಡುಗೆಗಳನ್ನು ಈ ರೀತಿ ಸಲ್ಲಿಸಬಹುದು**

- ಯಾವುದೇ ಒಂದು ಭಾಗದ ಕೆಲಸದ ಸಂಪೂರ್ಣ ವೆಚ್ಚವನ್ನು ವಹಿಸುವುದು.
- ನಿರ್ಮಾಣಕ್ಕೆ ಬೇಕಾದ ಸಾಮಗ್ರಿಗಳನ್ನು ನೀಡಿ ಸಹಕರಿಸುವುದು.
- ಅನ್ನದಾನದ ಖರ್ಚನ್ನು ಭರಿಸುವುದು.
- ಸ್ವಯಂಸೇವಕರಾಗಿ ಕರಸೇವೆಯಲ್ಲಿ ಭಾಗಿಗಳಾಗುವುದು.
- ಕಾಯಾ–ವಾಚಾ–ಮನಸಾ ದೇವಳದ ಪುನರ್‌ನಿರ್ಮಾಣ ಕಾರ್ಯಕ್ರಮದಲ್ಲಿ ಜೀರ್ಣೋದ್ಧಾರ ಸಮಿತಿ ಹಾಗೂ ಆಡಳಿತ ಮಂಡಳಿಯೊಂದಿಗೆ ಸಹಕರಿಸುವುದು.
- ನಿರ್ಮಾಣ ಕಾರ್ಯಕ್ಕೆ ಗರಿಷ್ಠ ಪ್ರಮಾಣದಲ್ಲಿ ಧನಸಹಾಯದಿಂದ ಸಹಕರಿಸುವುದು.

ದೇವಳದ ಪುನರ್‌ನಿರ್ಮಾಣ ಮಾಡಬೇಕೆಂಬ ಸಂಕಲ್ಪ ನಮ್ಮೆಲ್ಲರದು. ಇತಿಹಾಸವನ್ನು ಮತ್ತೆ ಕಟ್ಟುವ ಕೆಲಸಕ್ಕೆ ತೊಡಗಿದ್ದೇವೆ. ಬಿಂದು ಕೂಡಿ ಸಿಂಧುವಾಗಬೇಕಾಗಿದೆ. ಆಸ್ತಿಕ ಬಂಧುಗಳು, ಈ ಪುಣ್ಯ ಕಾರ್ಯದಲ್ಲಿ ತನು–ಮನ–ಧನಗಳಿಂದ ಸಹಕರಿಸಿ, ಶ್ರೀ ಸೋಮನಾಥೇಶ್ವರ ದೇವರ ಕೃಪೆಗೆ ಪಾತ್ರರಾಗಿ ಎಂಬುದು ನಿವೇದನೆ.

**"ಈ ದೇವಾಲಯ ನಮ್ಮದು, ಇದರ ಅಭಿವೃದ್ಧಿಗಾಗಿ ಬನ್ನಿ – ಭಾಗಿಗಳಾಗಿ – ಸಹಕರಿಸಿ"**

---

**ಭಕ್ತಾದಿಗಳು ತಮ್ಮ ದೇಣಿಗೆಗಳನ್ನು ಸಮಿತಿಯ ಈ ಖಾತೆಗೆ ಜಮಾ ಮಾಡಬಹುದು**
**ಶ್ರೀ ಸೋಮನಾಥೇಶ್ವರ ದೇವಸ್ಥಾನ ಅಭಿವೃದ್ಧಿ ಸಮಿತಿ**
**ಕರ್ಣಾಟಕ ಬ್ಯಾಂಕ್, ಮೂಡಬಿದಿರೆ**

**A/c. No. 4822500102101101 IFSC: KARB0000482**

Cell : 7349728073 e-mail : sst.puthige@gmail.com

Manjushri Printers, Ujire